# ಬಂಗಾರ ಬಣ್ಣದ ಸೇಬು

■ ವೇದಾವತಿ ಎಚ್.ಎಸ್.



ಚಿತ್ರ: ಶಶಿಧರ ಹಳೇಮನಿ

ತುಂಬಾ ಹಿಂದೆ ಒಬ್ಬ ರಾಜನಿದ್ದ. ಅವನು ಉದ್ಯಾನವನಗಳಲ್ಲಿ ಅಪರೂಪದ ಗಿಡಗಳನ್ನು ದೇಶ–ವಿದೇಶಗಳಿಂದ ತಂದು ಬೆಳೆಸುತ್ತಿದ್ದ. ಒಂದು ಸೇಬು ಗಿಡವನ್ನು ನೆಟ್ಟನು. ಅದು ಬೆಳೆದು ಅಪರೂಪದ ಬಂಗಾರ ಬಣ್ಣದ ಹಣ್ಣು ಬಿಡುವುದನ್ನು ನೋಡಿದ. ಹಣ್ಣು ಬಿಟ್ಟ ಮಾರನೇ ದಿನವೇ ಮಾಯವಾಗುತ್ತಿತ್ತು. ಈ ವಿಚಿತ್ರವನ್ನು ಕಂಡು ಅದನ್ನು ಯಾರು ಕದ್ದು ಒಯ್ಯುತ್ತಾರೆಂಬ ರಹಸ್ಯವನ್ನು ತಿಳಿಯಲು ತನ್ನ ದೊಡ್ಡ ಮಗನಿಗೆ ರಾತ್ರಿ ನಿದ್ದೆ ಮಾಡದೇ ಕಾಯಲು ತಿಳಿಸುತ್ತಾನೆ. ಅವನಿಗೆ ರಾತ್ರಿ ನಿದ್ದೆ ಬಂದು ರಹಸ್ಯವನ್ನು ತಿಳಿಯಲು ಸಾಧ್ಯವಾಗದೆ ಅರಮನೆಗೆ ಬರುತ್ತಾನೆ. ನಂತರ ರಾಜನು ತನ್ನ ಎರಡನೇ ಮಗನಿಗೂ ಅದೇ ರೀತಿಯಲ್ಲಿ ಹೇಳುತ್ತಾನೆ. ಅವನಿಗೂ ರಹಸ್ಯ ತಿಳಿಯಲು ಸಾಧ್ಯವಾಗುವುದಿಲ್ಲ. ಆನಂತರ ತನ್ನ ಕಿರಿಯ ಮಗನಿಗೆ ಕಾಯಲು ಅಜ್ಞಾಪಿಸುತ್ತಾನೆ. ಕಿರಿಯ ಮಗ ರಾತ್ರಿ ಪೂರ್ತಿ ಎಚ್ಚರವಿದ್ದು ಕಾಯುತ್ತಾ ಕುಳಿತುಕೊಳ್ಳುತ್ತಾನೆ.

ಸುಮಾರು ಮೂರನೇ ಜಾವದಲ್ಲಿ ಬಂಗಾರದ ಬಣ್ಣದ ಹಕ್ಕಿಯೊಂದು ಬಂದು ಸೇಬು ಹಣ್ಣನ್ನು ಕಚ್ಚಿಕೊಂಡು ಹೋಗುವುದನ್ನು ನೋಡಿ ರಾಜಕುಮಾರ ತನ್ನಲ್ಲಿದ್ದ ಬಾಣವನ್ನು ಬಿಡುತ್ತಾನೆ. ಅದು ಹಕ್ಕಿಯ ರೆಕ್ಕೆಗೆ ನಾಟಿ ರೆಕ್ಕೆ ಮಾತ್ರ ನೆಲಕ್ಕೆ ಬೀಳುತ್ತದೆ. ಹಕ್ಕಿಯು ತಪ್ಪಿಸಿಕೊಂಡು ಹೋಗುತ್ತದೆ. ಮರುದಿನ ಬೆಳಿಗ್ಗೆ ವಾಯುವಿಹಾರಕ್ಕೆ ಬಂದ ರಾಜ ಮತ್ತು ಅವನ ಮಂತ್ರಿಯು ಉದ್ಯಾನವನದಲ್ಲಿ ಬಿದ್ದಿರುವ ಹಕ್ಕಿಯ ರೆಕ್ಕೆಯನ್ನು ಗಮನಿಸುತ್ತಾರೆ. ಮಂತ್ರಿಯು ರಾಜನಲ್ಲಿ 'ಇದೊಂದು ಬಂಗಾರದ ಹಕ್ಕಿಯ ರೆಕ್ಕೆ. ಈ ಹಕ್ಕಿಯ ಹಾಡನ್ನು ಕೇಳುವವರಿಗೆ ಅವರಲ್ಲಿರುವ ರೋಗಗಳು ಮತ್ತು ಚಿಂತೆಗಳು ದೂರವಾಗುತ್ತವೆ' ಎಂದನು.

ಮಂತ್ರಿಯಿಂದ ಹಕ್ಕಿಯ ಬಗ್ಗೆ ತಿಳಿದ ರಾಜ ತನ್ನ ಮೂವರು ಮಕ್ಕಳನ್ನು ಕರೆದು 'ಯಾರು ಆ ಹಕ್ಕಿಯನ್ನು ಹಿಡಿದು ತರುತ್ತೀರೋ ಅವರನ್ನು ನನ್ನ ಉತ್ತರಾಧಿಕಾರಿಯಾಗಿ ನೇಮಿಸುತ್ತೇನೆ' ಎಂದ. ತಂದೆಯ ಮಾತಿನಂತೆ ಮೂವರು ಹಕ್ಕಿಯನ್ನು ಅರಸುತ್ತಾ ಒಂದೊಂದು ದಿಕ್ಕಿಗೆ ಹೊರಡಲು ಅಣಿಯಾದರು. ಅವರೆಲ್ಲ ಒಂದು ಸ್ಥಳದಲ್ಲಿ ಸೇರಿ 'ಒಂದು ವರ್ಷದ ನಂತರ ಇದೇ ಸ್ಥಳದಲ್ಲಿ ಸೇರಬೇಕೆಂದು' ಒಪ್ಪಂದ ಮಾಡಿಕೊಂಡರು. ನಂತರ ಆ ಜಾಗದಿಂದ ಮೂವರು ಮೂರು ದಿಕ್ಕಿಗೆ ಹಕ್ಕಿಯನ್ನು ಹುಡುಕುತ್ತಾ ಹೊರಟರು.

ಮೊದಲನೇ ರಾಜಕುಮಾರ ದೊಡ್ಡದಾದ ಬೆಟ್ಟದ ಕಡೆಗೆ ಹೋದನು. ಅವನಿಗೆ ಹಸಿವಾದ ಕಾರಣ ತಾನು ಅರಮನೆಯಿಂದ ತಂದಿರುವ ಬುತ್ತಿಯನ್ನು ತಿನ್ನಲು ಕುಳಿತನು. ಆಗ ಅವನ ಬಳಿಗೆ ನರಿಯೊಂದು ಬಂದು ಆಹಾರವನ್ನು ಬೇಡಿತು. ನರಿಗೆ ತನ್ನಲ್ಲಿದ್ದ ಆಹಾರವನ್ನು ಕೊಡದೆ ಅದನ್ನು ಅಲ್ಲಿಂದ ಓಡಿಸಿದನು. ಎರಡನೇ ರಾಜಕುಮಾರನು ಸಮುದ್ರದ ದಿಕ್ಕಿಗೆ ಸಾಗಿ, ಅವನು ಕೂಡ ಹಸಿವೆಂದು ಒಂದು ಮರದ ಕೆಳಗೆ ಕುಳಿತು ತನ್ನ ಬುತ್ತಿಯನ್ನು ಬಿಚ್ಚಿದನು. ಅವನ ಬಳಿಗೂ ಒಂದು ನರಿಯು ಬಂದು ಅವನಲ್ಲಿ ಆಹಾರವನ್ನು ಬೇಡಿತು. ಆಗ ಅವನು ತನ್ನ ಬಿಲ್ಲುಗಳಿಂದ ಅದನ್ನು ಹೆದರಿಸಿ ಅಲ್ಲಿಂದ ಓಡಿಸಿದನು. ರಾಜನ ಕಿರಿಯ ಮಗನು ಮತ್ತೊಂದು ದಿಕ್ಕಿಗೆ ಹೋಗಿ ದಣಿವೆಂದು ಮರದ ಕೆಳಗೆ ಕುಳಿತನು. ಅವನಿಗೆ ಹಸಿವೂ ಆಗಿತ್ತು. ತಾನು ಸಹ ಅರಮನೆಯಿಂದ ತಂದ ಆಹಾರದ ಬುತ್ತಿಯನ್ನು ಬಿಚ್ಚಿ ಇನ್ನೇನು ತಿನ್ನಬೇಕು ಎನ್ನುವಾಗ ನರಿಯೂ ಅಲ್ಲಿಗೆ ಬಂದು ಬೇಡಿತು. ಕಿರಿಯ ರಾಜಕುಮಾರ ತಾನು ತಂದಿದ್ದ ಪೂರ್ತಿ ಆಹಾರವನ್ನು ನರಿಗೇ ಕೊಟ್ಟನು. ನರಿಯಾದರೂ ಅರ್ಧ ಆಹಾರವನ್ನು ಮಾತ್ರ ತಾನು ತಿಂದು ಉಳಿದ ಅರ್ಧ ಆಹಾರವನ್ನು ರಾಜಕುಮಾರನಿಗೆ ಕೊಟ್ಟಿತು.

ನರಿಗೆ ಕಿರಿಯನ ಗುಣ ಇಷ್ಟವಾಯಿತು. ಅದು ಅವನಲ್ಲಿ 'ನೀನು ನನಗೆ ತಿನ್ನಲು ಆಹಾರವನ್ನು ಕೊಟ್ಟಿರುವುದರಿಂದ ನಾನು ನಿನಗೆ ಸಹಾಯವನ್ನು ಮಾಡುತ್ತೇನೆ. ನೀನು ನನ್ನನ್ನು ಹಿಂಬಾಲಿಸಿಕೊಂಡು ಬಾ. ನೀನು ಹುಡುಕುತ್ತಿರುವ ಹಕ್ಕಿಯಿರುವ ಜಾಗವನ್ನು ತೋರಿಸುತ್ತೇನೆ' ಎಂದಿತು.

ರಾಜಕುಮಾರನನ್ನು ನರಿ ಒಂದು ಕೋಟೆಯ ಬಳಿಗೆ ಕರೆದುಕೊಂಡು ಹೋಗಿ 'ರಾಜಕುಮಾರ, ನೀನು ಅಲ್ಲಿರುವ ಕೋಟೆಯೊಳಗೆ ಹೋಗು. ನಿನಗಲ್ಲಿ ಒಂದು ಕೋಣೆ ಸಿಗುತ್ತದೆ. ಅದರಲ್ಲಿ ಬಂಗಾರದ ಬೋನಿನಲ್ಲಿ ಕಪ್ಪು ಬಣ್ಣದ ಹಕ್ಕಿ ಕಾಣಿಸುತ್ತದೆ. ಮುಂದೆ ಎರಡನೇ ಕೋಣೆಯಲ್ಲಿ ಹನ್ನೆರಡು ಬಂಗಾರದ ಹಕ್ಕಿಗಳು ಒಂದೇ ಮರದ ಬೋನಿನಲ್ಲಿರುತ್ತವೆ, ಆ ನಂತರ ಅದರ ಮುಂದಿನ ಕೋಣೆಗೆ ಹೋಗು. ಅಲ್ಲಿ ಬಂಗಾರದ ಹಕ್ಕಿಯೊಂದು ಬಂಗಾರದ ಬೋನಿನಲ್ಲಿರುತ್ತದೆ. ಬಂಗಾರದ ಹಕ್ಕಿಯನ್ನು ನೀನು ಮರದ ಬೋನಿನಲ್ಲಿಟ್ಟುಕೊಂಡು ಹೊರಗೆ ಬರಬೇಕು' ಎಂದಿತು ನರಿ.

ನರಿ ತಿಳಿಸಿದಂತೆ ರಾಜಕುಮಾರ ಬಂಗಾರದ ಹಕ್ಕಿಯಿರುವ ಜಾಗಕ್ಕೆ ಬಂದನು. ಆ ಹಕ್ಕಿಯ ಸುಂದರವಾದ ಚೆಲುವನ್ನು ಕಂಡು ಮನಸೋತ. ಸುಂದರವಾದ ಹಕ್ಕಿಯನ್ನು ಮರದ ಬೋನಿನಲ್ಲಿಟ್ಟುಕೊಂಡು ತರಲು ಅವನಿಗೆ ಮನಸ್ಸು ಬರದೆ ಬಂಗಾರದ ಬೋನಿನಲ್ಲಿಟ್ಟು ಅದನ್ನು ಹೊರಗೆ ತಂದನು. ಆಗ ಬಂಗಾರದ ಹಕ್ಕಿ ಚೀರಾಡಲು ಪ್ರಾರಂಭಿಸಿತು. ಹಕ್ಕಿಯ ಚೀರಾಟವನ್ನು ಕೇಳಿ ಅದರ ಮಾಲೀಕ ಓಡಿ ಬಂದು ರಾಜಕುಮಾರನನ್ನು ಸೆರೆ ಹಿಡಿದು ಆ ರಾಜ್ಯದ ರಾಜನ ಬಳಿಗೆ ಕರೆದುಕೊಂಡು ಹೋದನು. ಆ ರಾಜ ಇವನನ್ನು ವಿಚಾರಣೆ ಮಾಡಲು 'ನನ್ನ ತಂದೆಯವರು ಯಾವುದೋ ರೋಗದಿಂದ ನರಳುತ್ತಿದ್ದಾರೆ. ಈ ಬಂಗಾರದ ಹಕ್ಕಿಯ ಹಾಡನ್ನು ಕೇಳಿದರೆ ಅವರ ರೋಗ ವಾಸಿಯಾಗುತ್ತದೆ. ಅದಕ್ಕಾಗಿ ನಾನು ಈ ಹಕ್ಕಿಯನ್ನು ನಮ್ಮ ರಾಜ್ಯಕ್ಕೆ ತೆಗೆದುಕೊಂಡು ಹೋಗಲು ಬಯಸುತ್ತೇನೆ' ಎಂದ. ರಾಜಕುಮಾರನ ಮಾತುಗಳನ್ನು ಕೇಳಿದ ರಾಜನು 'ನಾನು ನಿನಗೆ ಬಂಗಾರದ ಹಕ್ಕಿಯನ್ನು ಕೊಡುತ್ತೇನೆ. ಆದರೆ ನೀನು ನನಗೆ ಬಂಗಾರದ ಜುಟ್ಟನ್ನು ಹೊಂದಿರುವ ಕುದುರೆಯನ್ನು ತಂದು ಕೊಟ್ಟರೆ ಮಾತ್ರ' ಎಂದು ಷರತ್ತೊಂದನ್ನು ಹಾಕಿದ.

ರಾಜಕುಮಾರ ನರಿಯ ಬಳಿಗೆ ಬಂದು ಅಲ್ಲಿ ನಡೆದ ವಿಷಯಗಳನ್ನು ತಿಳಿಸಿದ. ನರಿಗೆ ತಾನು ಹೇಳಿದಂತೆ ರಾಜಕುಮಾರನು ನಡೆದುಕೊಳ್ಳದೇ ಇದ್ದುದಕ್ಕೆ ಅವನ ಮೇಲೆ ಕೋಪ ಬಂದಿತು. ಆದರೂ ಅವನಿಗೆ ಒಳ್ಳೆಯದಾಗಲಿಯೆಂದು ಬಂಗಾರದ ಜುಟ್ಟಿನ ಕುದುರೆಯಿರುವ ಸ್ಥಳವನ್ನು ತೋರಿಸಲು ಒಪ್ಪಿಗೆ ಸೂಚಿಸಿತು. ನರಿಯು ಅವನನ್ನು ತಾಮ್ರದ ಕೋಟೆಯಿರುವ ಜಾಗಕ್ಕೆ ಕರೆದುಕೊಂಡು ಹೋಗಿ 'ರಾಜಕುಮಾರ, ಕೋಟೆಯೊಳಗೆ ಎಲ್ಲರೂ ಮಲಗಿದ ಸಮಯದಲ್ಲಿ ನೀನು ಒಳಗೆ ಹೋಗು. ಅಲ್ಲಿ ನಿನಗೆ ಮೊದಲ ಕೋಣೆಯಲ್ಲಿ ಬಂಗಾರದ ಜುಟ್ಟನ್ನು ಹೊಂದಿರುವ ಬಿಳಿಯ ಕುದುರೆಯೊಂದು ಸಿಗುತ್ತದೆ. ಆ ಕೋಣೆಯಲ್ಲಿ ಒಂದು ಚರ್ಮದ ಜೀನು, ಮತ್ತೊಂದು ಬಂಗಾರದ ಜೀನು ಅಲ್ಲಿರುತ್ತದೆ. ಕುದುರೆಗೆ ಚರ್ಮದ ಜೀನನ್ನು ಹಾಕಿ ಹೊರಗೆ ಕರೆದುಕೊಂಡು ಬರಬೇಕು' ಎಂದು ತಿಳಿಸಿತು ನರಿ.